

بسم اللهِ الرّحمٰن الرّحيم

# ಮಕ್ಕಾ ವಿಜಯದ ನಂತರ ಇಸ್ಲಾಂ ಸ್ವೀಕಾರ ಮಾಡಿದ ಕೆಲವು ಕಠಿಣ ವಿರೋಧಿಗಳ ಪ್ರಸ್ತಾಪ.

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **08–08–2025** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಜಲ್ಸಕ್ಕೆ ಮುಂಚೆ ಮಕ್ಕಾ ವಿಜಯದ ಘಟನೆಗಳನ್ನು ಪ್ರಸ್ತಾಪಿಸಲಾಗುತ್ತಿತ್ತು. ಇಸ್ಲಾಂ ಧರ್ಮದ ಕೆಲವು ಕಠಿಣ ವಿರೋಧಿಗಳ ಇಸ್ಲಾಂ ಧರ್ಮ ಸ್ವೀಕಾರದ ಬಗ್ಗೆ ನಾನು ಹೇಳಿದ್ದೆ. ಅವರಲ್ಲಿ ಇನ್ನೂ ಕೆಲವರ ಪ್ರಸ್ತಾಪ ಮಾಡುತ್ತೇನೆ.

**ವಹ್‌ಶಿ ಬಿನ್ ಹರ್‌ಬ್:** ಇವರು ಉಹುದ್ ಯುದ್ಧದಲ್ಲಿ ಹಝ್ರತ್ ಹಮ್‌ಝಾ(ರ)ರನ್ನು ಶಹೀದ್ ಮಾಡಿದ್ದರು. ಇವರು ಮಕ್ಕಾ ವಿಜಯದ ನಂತರ ತಾಯಿಫ್‌ಗೆ ಓಡಿಹೋದರು. ತಾಯಿಫ್‌ನ ಜನರು ಇಸ್ಲಾಂ ಧರ್ಮವನ್ನು ಸ್ವೀಕಾರ ಮಾಡಿದಾಗ, ಇವರು ಕೂಡ ಬಂದು ಇಸ್ಲಾಮನ್ನು ಸ್ವೀಕರಿಸಿದರು. ಅವರು ಇಸ್ಲಾಂ ಸ್ವೀಕಾರ ಮಾಡುವಾಗ, 'ನೀನು ನನಗೆ ನಿನ್ನ ಮುಖವನ್ನು ತೋರಿಸದೇ ಇರಲು ಸಾಧ್ಯವೇ? ಎಂದು ಅವರೊಡನೆ ಹಝ್ರತ್ ಪೈಗಂಬರ್(ಸ) ಕೇಳಿದರು. ಹಝ್ರತ್ ಪೈಗಂಬರ್(ಸ)ರ ನಿಧನದ ನಂತರ, ಮುಸೈಲಿಮಾ ಕಝ್ಝಾಬ್ ದಂಗೆ ಎದ್ದಾಗ, ಹಝ್ರತ್ ಹಮ್‌ಝಾ(ರ)ರನ್ನು ಶಹೀದ್ ಮಾಡಿದ ಕಳಂಕವನ್ನು ತೊಳೆದು ಹಾಕಲು ವಹ್‌ಶಿ ಮುಸೈಲಿಮಾನ ವಿರುದ್ಧ ಯುದ್ಧದಲ್ಲಿ ಭಾಗವಹಿಸಿದರು. ಯುದ್ಧದ ಸಮಯದಲ್ಲಿ ವಹ್‌ಶಿ ತಮ್ಮ ಈಟಿಯಿಂದ ಹಲ್ಲೆ ಮಾಡಿ ಮುಸೈಲಿಮಾನನ್ನು ಕೊಂದುಬಿಟ್ಟರು.

**ಸಾರಾ:** ಇವಳು ಅಮ್ರ್ ಬಿನ್ ಹಾಶಿಮ್‌ನ ದಾಸಿಯೂ ಹಾಡುಗಾರ್ತಿಯೂ ಆಗಿದ್ದಳು. ಮಕ್ಕಾ ವಿಜಯದ ಮೊದಲು, ಅವರು ಹಝ್ರತ್ ಪೈಗಂಬರ್(ಸ)ರ ಬಳಿ ಸಹಾಯಕ್ಕಾಗಿ ಬಂದರು. 'ನಿನ್ನ ಹಾಡುಗಳಿಗೆ ಏನಾಯಿತು?' ಎಂದು ಹಝ್ರತ್ ಪೈಗಂಬರ್(ಸ) ಅವಳೊಡನೆ ಎಂದು ಕೇಳಿದಾಗ, ಅವಳು ಹೀಗೆ ಹೇಳಿದಳು: ಬದ್ರ್ ಯುದ್ಧದಲ್ಲಿ ಖುರೈಶಿಯರ ಮುಖಂಡರು ಮರಣಹೊಂದಿದ ನಂತರ ಮಕ್ಕಾದ ಜನರು ಹಾಡುಗಳನ್ನು ಕೇಳುವುದನ್ನು ನಿಲ್ಲಿಸಿರುವರು. ಅವಳಿಗೆ ಹಝ್ರತ್ ಪೈಗಂಬರ್(ಸ) ಒಂಟೆ ತುಂಬ ಧಾನ್ಯವನ್ನು ನೀಡಿದರು. ಆದರೂ ಅವಳು ಇಸ್ಲಾಂ ವಿರೋಧಿ ನಿಂದನೀಯ ಹಾಡುಗಳನ್ನು ಹಾಡುವುದನ್ನು ನಿಲ್ಲಿಸಲಿಲ್ಲ. ಹಝ್ರತ್ ಹಾತಿಬ್(ರ)ರ ಪತ್ರ ಪತ್ತೆಯಾಗಿದ್ದು ಈ ಮಹಿಳೆಯ ಬಳಿಯಿಂದಲೇ ಆಗಿತ್ತು. ಮಕ್ಕಾ ವಿಜಯದ ನಂತರ ಇವಳು ಇಸ್ಲಾಂ ಸ್ವೀಕಾರ ಮಾಡಿಕೊಂಡಳು ಮತ್ತು ಹಝ್ರತ್ ಉಮರ್(ರ)ರ ಖಿಲಾಫತ್ ಕಾಲದ ತನಕ ಬದುಕಿದ್ದಳು.

**ಇಬ್ನ್ ಖತಲ್‌ನ ಗುಲಾಮಿ ಮಹಿಳೆ ಫರ್ತನ:** ಇವಳು ಕೂಡ ಹಝ್ರತ್ ಪೈಗಂಬರ್(ಸ)ರ ಕುರಿತು ನಿಂದನೀಯ ಕವಿತೆಗಳನ್ನು ಹಾಡುತ್ತಿದ್ದಳು. ಮಕ್ಕಾ ವಿಜಯದ ನಂತರ ಇವಳು ಇಸ್ಲಾಂ ಧರ್ಮವನ್ನು ಸ್ವೀಕಾರ ಮಾಡಿಕೊಂಡಳು.

**ಹಾರಿಸ್ ಬಿನ್ ಹಿಶಾಮ್:** ಇವರು ಮಕ್ಕಾದ ಒಬ್ಬ ಜನಪ್ರಿಯ ಮುಖ್ಯಸ್ಥ ಮತ್ತು ಅಬೂ ಜಹಲ್‌ನ ಸಹೋದರನಾಗಿದ್ದರು. ಹಝ್ರತ್ ಖಾಲಿದ್(ರ)ರ ಸಹೋದರಿ ಇವರ ಪತ್ನಿಯಾಗಿದ್ದಳು. ಮಕ್ಕಾ ವಿಜಯದ ಸಮಯದಲ್ಲಿ, ಅವರು ಮತ್ತು ಅಬ್ದುಲ್ಲಾ ಬಿನ್ ಅಬೀ ರಬೀಅ ಹಝ್ರತ್ ಉಮ್ಮು ಹಾನಿ(ರ)ರ ಮನೆಗೆ ಪ್ರವೇಶಿಸಿದರು. 'ನಾನು ಅವರಿಗೆ ಆಶ್ರಯ ನೀಡಿದ್ದೇನೆ' ಎಂದು ಹಝ್ರತ್ ಉಮ್ಮು ಹಾನಿ(ರ) ಹಝ್ರತ್ ಪೈಗಂಬರ್(ಸ)ರೊಡನೆ ಹೇಳಿದಾಗ, ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು: 'ನೀನು ಯಾರಿಗೆ ಆಶ್ರಯ ನೀಡಿದ್ದೀಯೋ, ಅವರಿಗೆ ನಾವು ಅಭಯ ನೀಡುತ್ತೇವೆ'. ಕೆಲವು ದಿನಗಳ ನಂತರ, ಅವರು ಹಝ್ರತ್ ಪೈಗಂಬರ್(ಸ)ರ ಬಳಿಗೆ ಬಂದು ಶಹಾದತ್ ಕಲಿಮ ಹೇಳಿದರು. ಹಝ್ರತ್ ಪೈಗಂಬರ್(ಸ) ಹೇಳಿದರು: ಎಲ್ಲ ಪ್ರಶಂಸೆಗಳು ಅಲ್ಲಾಹನಿಗೆ ಸಲ್ಲುತ್ತವೆ. ಹಾರಿಸ್, ನಿನ್ನಂತಹ ವ್ಯಕ್ತಿ ಇಸ್ಲಾಂ ಧರ್ಮದಿಂದ ಹೇಗೆ ದೂರವಿರಲು ಸಾಧ್ಯ? ಆಗ ಹಾರಿಸ್ ಹೇಳಿದರು: ದೇವನಾಣೆ, ಇಸ್ಲಾಮಿನಿಂದ ದೂರವಿರುವುದು ಸಾಧ್ಯವಲ್ಲ.

**ಸುಹೈಲ್ ಬಿನ್ ಅಮ್ರ್:** ಇವರೂ ಇಸ್ಲಾಂ ಧರ್ಮವನ್ನು ಸ್ವೀಕರಿಸಿದರು. ಹುದೈಬಿಯಾ ಒಪ್ಪಂದಕ್ಕಾಗಿ ಇವರು ಖುರೈಶಿಯರ ಪ್ರತಿನಿಧಿಯಾಗಿ ಬಂದಿದ್ದರು. ಅವರು ಸ್ವತಃ ಹೀಗೆ ಹೇಳುತ್ತಾರೆ: ಮಕ್ಕಾ ವಿಜಯದ ನಂತರ ಹಝ್ರತ್ ಪೈಗಂಬರ್(ಸ) ನಮ್ಮ ಮೇಲೆ ಮೇಲುಗೈ ಸಾಧಿಸಿದಾಗ, ನಾನು ಮನೆಯೊಳಗೆ ಅಡಗಿಕೊಂಡೆ ಮತ್ತು ನನ್ನ ಮಗನನ್ನು ಮುಹಮ್ಮದ್(ಸ)ರ ಬಳಿಗೆ ಕಳುಹಿಸಿ ನನಗಾಗಿ ಆಶ್ರಯ ಕೇಳಿದೆ. ಹಝ್ರತ್ ಪೈಗಂಬರ್(ಸ) ಸುಹೈಲ್‌ಗೆ ಆಶ್ರಯ ನೀಡಿದರು ಮತ್ತು ಹೀಗೆ ಹೇಳಿದರು: 'ಸುಹೈಲ್‌ನಂತಹ ಬುದ್ಧಿವಂತ

ಮತ್ತು ಗೌರವಾನ್ವಿತ ವ್ಯಕ್ತಿ ಇಸ್ಲಾಂ ಧರ್ಮದಿಂದ ಹೆಚ್ಚು ಕಾಲ ದೂರವಿರಲು ಸಾಧ್ಯವಿಲ್ಲ.' ಈ ಸುದ್ದಿ ಸುಹೈಲ್‌ಗೆ ತಲುಪಿದಾಗ, ಅವರು ಹೀಗೆ ಹೇಳಿದರು: ಮುಹಮ್ಮದ್(ಸ) ಬಾಲ್ಯದಲ್ಲೂ ಉಪಕಾರಿಯಾಗಿದ್ದರು ಮತ್ತು ಈ ವಯಸ್ಸಿನಲ್ಲೂ ಔದಾರ್ಯವಂತರಾಗಿದ್ದಾರೆ. ಹುನೈನ್ ಯುದ್ಧದಲ್ಲಿ ಅವರು ಇಸ್ಲಾಂ ಸ್ವೀಕಾರ ಮಾಡದೇ ಯುದ್ಧದಲ್ಲಿ ಭಾಗಿಯಾಗಿದ್ದರು, ಆದರೆ ಯುದ್ಧದ ನಂತರ ಇಸ್ಲಾಮನ್ನು ಸ್ವೀಕರಿಸಿದರು. ಮಕ್ಕಾ ವಿಜಯದ ನಂತರ ಇಸ್ಲಾಮನ್ನು ಸ್ವೀಕಾರ ಮಾಡಿಕೊಂಡ ಖುರೈಶೀ ಮುಖಂಡರಲ್ಲಿ ಯಾರೂ ಕೂಡ ಸುಹೈಲ್‌ಗಿಂತ ಹೆಚ್ಚು ನಿಯತವಾಗಿ ನಮಾಝ್, ಉಪವಾಸ ಮತ್ತು ದಾನ ಮಾಡುವುದರಲ್ಲಿ ಮುಂದೆ ಇದ್ದಿರಲಿಲ್ಲ ಎಂದು ಅವರ ಕುರಿತು ಬರೆಯಲಾಗಿದೆ. ಬಹಳ ಹೆಚ್ಚು ದುಆ ಮಾಡುವವರಾಗಿದ್ದರು ಮತ್ತು ಪವಿತ್ರ ಖುರ್‌ಆನ್ ಪಾರಾಯಣ ಮಾಡುವಾಗ ಅಳುತ್ತಿದ್ದರು.

ಸುಹೈಲ್ ಬಿನ್ ಅಮ್ರ್ ಅವರ ಇನ್ನೊಂದು ಮಹಾತ್ಕಾರ್ಯದ ಬಗ್ಗೆ ಹೀಗೆ ಹೇಳಲಾಗಿದೆ: ಖುರೈಶಿಯರಲ್ಲಿ ಸುಹೈಲ್ ಒಬ್ಬ ಉತ್ತಮ ವಾಗ್ಮಿಯೂ ಆಗಿದ್ದರು. ಬದ್ರ್ ಯುದ್ಧದಲ್ಲಿ ಇವರು ಇಸ್ಲಾಂ ವಿರೋಧಿಯಾಗಿ ಬಂಧಿಯಾಗಿ ಬಂದಾಗ, ಅವರು ತನ್ನ ತುಟಿಗಳ ಮೇಲೆ ಗುರುತು ಮಾಡಿಕೊಂಡಿದ್ದರು. ಆಗ ಹಝ್ರತ್ ಉಮರ್(ರ) ಹಝ್ರತ್ ಪೈಗಂಬರ್(ಸ)ರೊಡನೆ ಹೀಗೆ ಹೇಳಿದರು: ಅಲ್ಲಾಹನ ರಸೂಲರೇ, ಇವರ ಮುಂದಿನ ಎರಡು ಹಲ್ಲುಗಳನ್ನು ತೆಗೆಸಿಬಿಡಿರಿ, ಇದರಿಂದ ಇವರಿಗೆ ನಿಮ್ಮ ವಿರುದ್ಧ ಭಾಷಣ ಮಾಡಲಿಕ್ಕಾಗಿ ನಿಲ್ಲಲು ಸಾಧ್ಯವಾಗದು. ಹಝ್ರತ್ ಪೈಗಂಬರ್(ಸ) ಹೇಳಿದರು: 'ಹೇ ಉಮರ್, ಅವನನ್ನು ಬಿಟ್ಟುಬಿಡು, ಒಂದು ದಿನ ನೀವು ಅವರನ್ನು ಹೊಗಳುವ ಸ್ಥಾನದಲ್ಲಿ ಅವರು ನಿಲ್ಲುವರು.' ಅವರನ್ನು ಶಿಕ್ಷಿಸಬೇಕೆಂದು ಹಝ್ರತ್ ಉಮರ್(ರ) ಬಯಸುತ್ತಿದ್ದರು. ಆದರೆ ಹಾಗೆ ಮಾಡುವುದು ಬೇಡವೆಂದೂ ನೀವು ಅವರನ್ನು ಹೊಗಳುವಂತಹ ಮಾತುಗಳನ್ನು ಆಡುವ ಸ್ಥಾನಕ್ಕೆ ಅವರು ತಲುಪುವರು ಎಂದೂ ಹಝ್ರತ್ ಪೈಗಂಬರ್(ಸ) ಹೇಳಿದರು. ಆ ಸಂದರ್ಭ ಹೇಗೆ ಬಂತು ಎಂದರೆ, ಹಝ್ರತ್ ಪೈಗಂಬರ್(ಸ)ರ ನಿಧನದ ನಂತರ ಮಕ್ಕಾದ ಜನರು ವಿಚಲಿತರಾದಾಗ, ಮಕ್ಕಾದ ಜನರು ಇಸ್ಲಾಮನ್ನು ತ್ಯಜಿಸುವುದನ್ನು ಖುರೈಶಿಯರು ಕಂಡರು. ಮಕ್ಕಾದ ಮುಖ್ಯಸ್ಥರಾಗಿ ಹಝ್ರತ್ ಪೈಗಂಬರ್(ಸ) ನೇಮಿಸಿದ್ದ ಹಝ್ರತ್ ಇತಾಬ್ ಬಿನ್ ಉಸೈದ್ ಅಮವೀ(ರ) ಅಡಗಿಕೊಂಡರು. ಅಂತಹ ಕೆಟ್ಟ ಪರಿಸ್ಥಿತಿಯಲ್ಲಿ ಹಝ್ರತ್ ಸುಹೈಲ್ ಬಿನ್ ಅಮ್ರ್(ರ) ನಿಂತುಕೊಂಡು ಹೀಗೆ ಭಾಷಣ ಮಾಡಿದರು: ಎಲೈ ಖುರೈಶ್ ಸಮೂಹವೇ, ನೀವು ಕೊನೆಯಲ್ಲಿ ಇಸ್ಲಾಮನ್ನು ಸ್ವೀಕಾರ ಮಾಡಿಕೊಂಡಿದ್ದೀರಿ. ಕೊನೆಯಲ್ಲಿ ಇಸ್ಲಾಮನ್ನು ಸ್ವೀಕಾರ ಮಾಡಿಕೊಂಡು, ಇಸ್ಲಾಮನ್ನು ಬಿಡುವುದರಲ್ಲಿ ಮೊದಲಿಗರಾಗಬೇಡಿರಿ. ಅಲ್ಲಾಹನಾಣೆ, ಸೂರ್ಯ ಮತ್ತು ಚಂದ್ರ ಉದಯದಿಂದ ಅಸ್ತಮದ ತನಕ ಚಲಿಸುವಂತೆ ಈ ಧರ್ಮವು ಹರಡುವುದು. ಹೀಗೆ ಸುಹೈಲ್(ರ) ದೀರ್ಘವಾದ ಭಾಷಣ ಮಾಡಿದರು. ಈ ಭಾಷಣವು ಮಕ್ಕಾದ ಜನರ ಹೃದಯಗಳ ಮೇಲೆ ಪ್ರಭಾವ ಬೀರಿತು ಮತ್ತು ಅವರು ಇಸ್ಲಾಮ್ ಧರ್ಮವನ್ನು ಬಿಟ್ಟುಹೋಗಲಿಲ್ಲ. ಅಡಗಿಕೊಂಡಿದ್ದ ಹಝ್ರತ್ ಅತ್ತಾಬ್ ಬಿನ್ ಉಸೈದ್(ರ)ರನ್ನೂ ಕರೆಯಲಾಯಿತು. ಖುರೈಶಿಯರು ಇಸ್ಲಾಮ್ ಧರ್ಮದಲ್ಲಿ ಸ್ಥಿರಚಿತ್ತರಾಗಿ ನಿಂತರು.

**ಹಝ್ರತ್ ಉತ್ಬ ಮತ್ತು ಮುಅತ್ತಬ್ ಇಸ್ಲಾಂ ಸ್ವೀಕಾರ:** ಹಝ್ರತ್ ಅಬ್ಬಾಸ್(ರ) ವರದಿ ಮಾಡುತ್ತಾರೆ: ಮಕ್ಕಾ ವಿಜಯದ ದಿನ ಅಬುಲಹಬ್‌ನ ಪುತ್ರರಾದ ಉತ್ಬ ಮತ್ತು ಮುಅತ್ತಬ್ ಬಗ್ಗೆ ಹಝ್ರತ್ ಪೈಗಂಬರ್(ಸ) ಕೇಳಿದಾಗ, ಅವರು ಇತರ ಮುಶ್ರಿಕರ ಹಾಗೆಯೇ ಇಸ್ಲಾಮಿನಿಂದ ದೂರವಿದ್ದಾರೆ ಎಂದು ನಾನು ಹೇಳಿದೆ. ಹಝ್ರತ್ ಪೈಗಂಬರ್(ಸ)ರ ಸೂಚನೆಯ ಮೇರೆಗೆ ನಾನು ಅವರನ್ನು ಕರೆತಂದೆ. ಹಝ್ರತ್ ಪೈಗಂಬರ್(ಸ) ಇಬ್ಬರನ್ನೂ ಇಸ್ಲಾಂ ಧರ್ಮಕ್ಕೆ ಆಹ್ವಾನಿಸಿದರು. ಅವರು ಇಸ್ಲಾಂ ಸ್ವೀಕಾರ ಮಾಡಿಕೊಂಡು ಬೈಅತ್ ಪ್ರತಿಜ್ಞೆ ಮಾಡಿದರು. ಅನಂತರ ಹಝ್ರತ್ ಪೈಗಂಬರ್(ಸ) ಎದ್ದು, ಅವರ ಕೈಗಳನ್ನು ಹಿಡಿದು, ಹಜರೇ ಅಸ್ವದ್ ಮತ್ತು ಕಅಬದ ಬಾಗಿಲಿನ ನಡುವಿನ ಮುಲ್‌ತಝಮ್ ಎಂಬ ಗೋಡೆಯ ಭಾಗಕ್ಕೆ ಕರೆತಂದರು. ಅದನ್ನು ಹಿಡಿದು ದುಆ ಮಾಡುವುದು ಸುನ್ನತ್ ಆಗಿದೆ ಮತ್ತು ಅದು ದುಆ ಸ್ವೀಕಾರದ ವಿಶೇಷ ಸ್ಥಳವಾಗಿದೆ. ಹಝ್ರತ್ ಪೈಗಂಬರ್(ಸ) ಅಲ್ಲಿ ಕೆಲವು ಸಮಯ ದುಆ ಮಾಡಿದರು. ಹಝ್ರತ್ ಪೈಗಂಬರ್(ಸ)ರ ಮುಖದ ಮೇಲೆ ಸಂತೋಷವನ್ನು ಕಾಣಬಹುದಾಗಿತ್ತು. ಹಝ್ರತ್ ಅಬ್ಬಾಸ್(ರ) ಹೇಳಿದರು: ಅಲ್ಲಾಹನ ಪ್ರವಾದಿಯೇ(ಸ), ಅಲ್ಲಾಹನು ನಿಮ್ಮನ್ನು ಸಂತೋಷವಾಗಿರಿಸಲಿ, ನಾನು ನಿಮ್ಮ ಮುಖದಲ್ಲಿ ಸಂತೋಷದ ಚಿಹ್ನೆಗಳನ್ನು ನೋಡುತ್ತಿದ್ದೇನೆ. ಹಝ್ರತ್ ಪೈಗಂಬರ್(ಸ) ಹೇಳಿದರು: ನಾನು ನನ್ನ ಚಿಕ್ಕಪ್ಪನ ಇಬ್ಬರು ಮಕ್ಕಳನ್ನು ನನ್ನ ಪ್ರಭುವಿನಿಂದ ಬೇಡಿದ್ದೆ, ಅವನು ನನಗೆ ಇಬ್ಬರನ್ನೂ ದಯಪಾಲಿಸಿದನು.

**ಸಫ್ವಾನ್ ಬಿನ್ ಉಮಯ್ಯಾ:** ಇವರು ಮಕ್ಕಾದ ಮುಖಂಡ ಉಮಯ್ಯಾ ಬಿನ್ ಖಲಫ್‌ರ ಪುತ್ರನಾಗಿದ್ದರು. ಬದ್ರ್ ಯುದ್ಧದ ನಂತರ ಅವರು ಹಝ್ರತ್ ಪೈಗಂಬರ್(ಸ)ರನ್ನು ವಧಿಸಲು ಸಂಚು ಹೂಡಿದ್ದರು. ಮಕ್ಕಾ ವಿಜಯದ ಸಮಯದಲ್ಲಿ, ಹಝ್ರತ್ ಉಮೈರ್ ಬಿನ್ ವಹಬ್(ರ) ಹಝ್ರತ್ ಪೈಗಂಬರ್(ಸ)ರೊಡನೆ ಸಫ್ವಾನ್‌ಗಾಗಿ ಆಶ್ರಯ ಕೇಳಿದರು, ಅದನ್ನು ಹಝ್ರತ್ ಪೈಗಂಬರ್(ಸ) ಒಪ್ಪಿಕೊಂಡರು. ಸಫ್ವಾನ್ ಹಝ್ರತ್ ಪೈಗಂಬರ್(ಸ) ಬಳಿಗೆ ಬಂದು ತಾನು ಇಸ್ಲಾಮನ್ನು ಈಗ ಸ್ವೀಕಾರ ಮಾಡುವುದಿಲ್ಲ ಎಂದು ಹೇಳಿದರು. ಎಂದರೆ ಸ್ವಲ್ಪ ಸಮಯದ ಕಾಲಾವಕಾಶವನ್ನು ಕೇಳಿದರು. ಹಝ್ರತ್ ಪೈಗಂಬರ್(ಸ) ತಾಯಿಫ್ ಮತ್ತು ಹುನೈನ್ ಯುದ್ಧದ ನಂತರ ಯುದ್ಧ ಸಂಪತ್ತನ್ನು ಹಂಚಿದಾಗ, ಕುರಿ ಮತ್ತು ಮೇಕೆಗಳಿಂದ ತುಂಬಿರುವ ಒಂದು ಕಣಿವೆಯನ್ನು ನೋಡಿ ಸಫ್ವಾನ್ ಆಶ್ಚರ್ಯಚಕಿತಗೊಂಡರು. ಅವರ ಸ್ಥಿತಿಯನ್ನು ನೋಡಿ ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು: ಈ ಕಣಿವೆ ಮತ್ತು ಅದರಲ್ಲಿ ಇರುವುದೆಲ್ಲವೂ ನಿನ್ನದು. ಅದನ್ನು ತೆಗೆದುಕೊಂಡು ಹೋಗು. ಆ ಎಲ್ಲ ಸಂಪತ್ತನ್ನು ಸಫ್ವಾನ್ ತೆಗೆದುಕೊಂಡರು. ಅವರು ಹೀಗೆ ಹೇಳಿದರು: ಒಬ್ಬ ಪ್ರವಾದಿ ದಾನ ಮಾಡುವಷ್ಟು ಉತ್ತಮವಾಗಿ ಯಾರೂ ದಾನ ಮಾಡಲಾರರು. ಹೀಗೆ ಹೇಳಿಕೊಂಡು ಅವರು ಅಲ್ಲೇ ಇಸ್ಲಾಂ ಧರ್ಮವನ್ನು ಸ್ವೀಕಾರ ಮಾಡಿದರು.

(ಹುಝೂರ್ ಹೇಳಿದರು:) ಮಕ್ಕಾ ವಿಜಯದ ಸಮಯದಲ್ಲಿ ಇಸ್ಲಾಮನ್ನು ಸ್ವೀಕಾರ ಮಾಡಿದ ಈ ಮಕ್ಕಾದ ಮುಖಂಡರು ನಂತರ ತಮ್ಮ ಜೀವನದಲ್ಲಿ ದೊಡ್ಡ ಆಧ್ಯಾತ್ಮಿಕ ಬದಲಾವಣೆಯನ್ನು ಮಾಡಿದ್ದರು. ಇದನ್ನು ವಿವರಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೀಗೆ ಹೇಳುತ್ತಾರೆ: ಒಮ್ಮೆ ಹಝ್ರತ್ ಉಮರ್(ರ) ತಮ್ಮ ಖಿಲಾಫತ್ ಕಾಲದಲ್ಲಿ ಮಕ್ಕಾಗೆ ಬಂದಾಗ, ನಗರದ ಹಿರಿಯ ಮುಖಂಡರು ತಮ್ಮ ಕಳೆದುಹೋದ ಗೌರವವನ್ನು ಮರಳಿ ಪಡೆಯಬಹುದು ಎಂಬ ಭಾವನೆಯಿಂದ ಅವರನ್ನು ಭೇಟಿಯಾಗಲು ಬಂದರು. ಅವರು ಮಾತನಾಡುತ್ತಿರುವಾಗ, ಒಬ್ಬರ ನಂತರ ಮತ್ತೊಬ್ಬರಂತೆ ಆರಂಭದಲ್ಲಿ ಇಸ್ಲಾಂ ಸ್ವೀಕಾರ ಮಾಡಿದ್ದ ಗುಲಾಮರು ಆ ಮಜ್ಲಿಸ್‌ಗೆ ಬರತೊಡಗಿದರು. ಆರಂಭ ಕಾಲದಲ್ಲಿ ಮುಸ್ಲಿಮರಾದ ಈ ಗುಲಾಮರು ಬರುವಾಗಲೆಲ್ಲಾ ಮುಖಂಡರೊಡನೆ ಹಝ್ರತ್ ಉಮರ್(ರ) ಹೀಗೆ ಹೇಳುತ್ತಿದ್ದರು: ಸ್ವಲ್ಪ ಹಿಂದೆ ಸರಿಯಿರಿ, ಅವರಿಗೆ ಮುಂದೆ ಕುಳಿತುಕೊಳ್ಳಲು ಅವಕಾಶ ನೀಡಿರಿ. ಹೀಗೆ ಹಿಂದೆ ಸರಿಯುತ್ತಾ, ಕೊನೆಯಲ್ಲಿ ಮುಖಂಡರಿಗೆ ಚಪ್ಪಲಿಗಳ ಬಳಿ ಕುಳಿತುಕೊಳ್ಳಬೇಕಾಯಿತು. ಇದನ್ನು ಸಹಿಸಿಕೊಳ್ಳಲು ಸಾಧ್ಯವಾಗದೆ, ಅವರು ಎದ್ದು ಹೊರಗೆ ಹೋದರು. ಇಂದು ನಮಗೆ ಎಷ್ಟು ಅವಮಾನವಾಗಿದೆ ಎಂದು ಹೊರಗೆ ಹೋಗಿ ಅವರು ಪರಸ್ಪರ ದೂರುಹೇಳಲು ತೊಡಗಿದರು. ಆಗ ಅವರಲ್ಲಿ ಒಬ್ಬ ಯುವಕ ಹೀಗೆ ಹೇಳಿದರು: ಇದರಲ್ಲಿ ಹಝ್ರತ್ ಉಮರ್(ರ)ರ ತಪ್ಪೇನೂ ಇಲ್ಲ. ಇದು ನಮ್ಮ ಪೂರ್ವಜರು ಮಾಡಿದ ತಪ್ಪಾಗಿತ್ತು, ಅದಕ್ಕಾಗಿ ಇಂದು ನಾವು ಶಿಕ್ಷೆ ಅನುಭವಿಸುತ್ತಿದ್ದೇವೆ. ಇದನ್ನು ಕೇಳಿ, ಈ ಅವಮಾನದ ಕಳಂಕವನ್ನು ಅಳಿಸಲು ಯಾವುದೇ ಮಾರ್ಗವಿದೆಯೇ? ಎಂದು ಇತರರು ಕೇಳಿದರು. ಆಗ ಎಲ್ಲರೂ ಪರಸ್ಪರ ಚರ್ಚಿಸಿ ಹಝ್ರತ್ ಉಮರ್(ರ)ರ ಬಳಿ ಬಂದರು. ಅವರು ಈ ವಿಷಯವನ್ನು ಹೇಳಿದಾಗ, ಹಝ್ರತ್ ಉಮರ್(ರ)ರಿಗೆ ದುಃಖದಿಂದ ಮಾತನಾಡಲು ಸಾಧ್ಯವಾಗಲಿಲ್ಲ. ಅವರು ಕೇವಲ ತಮ್ಮ ಕೈ ಎತ್ತಿ ಉತ್ತರ ದಿಕ್ಕಿಗೆ ಬೊಟ್ಟು ಮಾಡಿದರು. ಅದರ ಅರ್ಥವೇನೆಂದರೆ, ಉತ್ತರ ದಿಕ್ಕಿನಲ್ಲಿರುವ ಸಿರಿಯಾದಲ್ಲಿ, ಇಸ್ಲಾಮಿನ ಕೆಲವು ಯುದ್ಧಗಳು ನಡೆಯುತ್ತಿವೆ, ನೀವು ಆ ಯುದ್ಧಗಳಲ್ಲಿ ಭಾಗವಹಿಸಿದರೆ, ಬಹುಶಃ ಅದು ಈ ಕಳಂಕವನ್ನು ಅಳಿಸಬಹುದು. ತಕ್ಷಣವೇ ಅವರು ಅಲ್ಲಿಂದ ಎದ್ದು, ಆ ಯುದ್ಧಗಳಲ್ಲಿ ಭಾಗವಹಿಸಲು ಹೊರಟರು. ಆ ಮುಖಂಡರ ಪುತ್ರರಲ್ಲಿ ಯಾರೂ ಜೀವಂತವಾಗಿ ಹಿಂದಿರುಗಲಿಲ್ಲ ಮತ್ತು ಎಲ್ಲರೂ ಅಲ್ಲೇ ಹುತಾತ್ಮರಾದರು ಎಂದು ಚರಿತ್ರೆ ಹೇಳುತ್ತದೆ. ಈ ರೀತಿಯಾಗಿ ಅವರು ತಮ್ಮ ಕುಟುಂಬಗಳ ಮೇಲಿದ್ದ ಅವಮಾನದ ಕಳಂಕವನ್ನು ಅಳಿಸಿದರು.

ಮಕ್ಕಾ ವಿಜಯದ ನಂತರ ತಕ್ಷಣವೇ, ಜನರ ಹೃದಯಗಳಿಂದ ವಿಗ್ರಹಗಳ ಕಲ್ಪಿತ ಭಯವನ್ನು ನೀಗಿಸಲಿಕ್ಕಾಗಿ ವಿಗ್ರಹಗಳ ಸ್ಥಳಗಳನ್ನು ನಾಶಪಡಿಸಲು ಹಝ್ರತ್ ಪೈಗಂಬರ್(ಸ) ಆದೇಶಿಸಿದರು.

(ಹುಝೂರ್ ಹೇಳಿದರು:) ಇನ್ನೂ ಕೆಲವು ಘಟನೆಗಳನ್ನು ನಾನು ಮುಂದಿನ ಬಾರಿ ವಿವರಿಸುತ್ತೇನೆ ಇನ್‌ಶಾ ಅಲ್ಲಾಹ್

(ಖುತ್ಬದ ಕೊನೆಯಲ್ಲಿ ಹುಝೂರ್, ಇಬ್ಬರು ದಿವಂಗತರ ಬಗ್ಗೆ ಪ್ರಸ್ತಾಪಿಸಿದರು ಮತ್ತು ಅವರ ಮಗ್‌ಫಿರತ್ ಮತ್ತು ಉನ್ನತ ಪದವಿಗಳಿಗಾಗಿ ದುಆ ಮಾಡಿದರು ಹಾಗೂ ಅವರ ಜನಾಝ ಗಾಯಿಬ್ ನಿರ್ವಹಿಸುವುದಾಗಿ ಹೇಳಿದರು.)

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ

مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ

فَلَاهَادِىَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ

عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى

وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ٥ اُذْكُرُوا اللّٰهَ

يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis****(atba)*

At, ***'Masjid Mubarak',*** *Islamabad, Tilford,* U.K. On 08-08-2025

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim | ***Layout****:* Basheer K.P. Manjeshwar

***Published By****:* Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon